ಬೆಳಿಗ್ಗೆ 24ಕ್ಕೆ ಶ್ರೀ ಬಸ್ಲಿಂಗಯ್ಯ ಹಿರೇಮಠ ಮತ್ತು ತಂಡದವರಿಂದ ವೀರರಾಣಿ ಕಿತ್ತೂರು ಚನ್ನಮ್ಮ ಹಾಗೂ ಆಕೆಯ ಬಲಗೈ ಬಂಟ ಸಂಗೊಳ್ಳಿ ರಾಯಣ್ಣನ ಕುರಿತು ಲಾವಣಿ ಹಾಡಲಾಯಿತು.

ಸ್ವಾಗತ ಭಾಷಣ

ಸನ್ಮಾನ್ಯ ಸಭಾಧ್ಯಕ್ಷರು; ವಿಧಾನಸಭೆ:

ಮಾನ್ಯರೇ,

ಕನ್ನಡ ನಾಡಿಗೆ ಈಗ ಸುವರ್ಣ ವರ್ಷದ ಸಂಭ್ರಮ. 1956ನೇ ಇಸವಿ ನವೆಂಬರ್ 1 ರಂದು ಹರಿದು ಹಂಚಿ ಹೋಗಿದ್ದ ಕನ್ನಡಿಗರು ಕೊನೆಗೂ ಒಂದೇ ಸೂರಿನಡಿ ಕನ್ನಡದ ಹೆಸರಿನಲ್ಲಿ ತನ್ನದೇ ಆದ ನೆಲೆ, ನೆಲ ಕಂಡುಕೊಂಡರು. ಆದರೆ 'ಕರ್ನಾಟಕ' ಎಂದೇ ಈ ನಾಡಿಗೆ ನಾಮಕರಣವಾಗಬೇಕೆಂಬುದು ಕನ್ನಡಿಗರ ಬಹುದಿನಗಳ ಕನಸಾಗಿತ್ತು. **1973ರಲ್ಲಿ** ದಿವಂಗತ ಶ್ರೀ ದೇವರಾಜ ಅರಸ್ ಅವರು ಮುಖ್ಯಮಂತ್ರಿಗಳಾಗಿದ್ದಾಗ ವಿಶಾಲ **ಮೈಸೂರು 'ಕರ್ನಾಟಕ'ವೆಂದು ಸಂವಿಧಾನಬದ್ಧವಾಗಿ ಅಧಿಕೃತವಾಗಿ ನಾಮಾಂಕಿತಗೊಂಡು ಈ ಕನಸು ನನಸಾಯಿತು.** ಸಮಸ್ತ ಕನ್ನಡಿಗರ ತನು, ಮನ ಪುಳಕಗೊಂಡಿತು. ಕನ್ನಡ ತಾಯಿ ಭುವನೇಶ್ವರಿಯ ಕೃಪಾಕಟಾಕ್ಷದಿಂದ 50ನೇ ವರ್ಷಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿ ದಿನಾಂಕ. 20.11.2005ರಂದು ಎರಡು ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ, ಗೌರವಾನ್ವಿತ ರಾಷ್ಟ್ರಪತಿಗಳು ಸಂದೇಶ ನೀಡಿದ್ದು, ಆ ಸಮಯದಲ್ಲಿ ತಾವು ಉಪಸ್ಥಿತರಿದ್ದಿರಿ ಎಂಬುದನ್ನು ಸ್ಮರಿಸುತ್ತಾ, ಕರ್ನಾಟಕ ಏಕೀಕರಣಗೊಂಡು **50 ಸಾರ್ಥಕ ವರ್ಷಗಳನ್ನು** ಪೂರೈಸುತ್ತಿರುವ ಈ ಶುಭ ಘಳಿಗೆಯಲ್ಲಿ ಘನತೆವೆತ್ತ ರಾಜ್ಯಪಾಲರು ಈ ಬೆಳಗಾವಿ ಅಧಿವೇಶನದಲ್ಲಿ ಉಭಯ ಸದನಗಳ ಮಾನ್ಯ ಸದಸ್ಯರುಗಳನ್ನು ಉದ್ದೇಶಿಸಿ ಮಾತನಾಡುತ್ತಿರುವುದು ಒಂದು ಯೋಗಾನುಯೋಗ. ಇದು ನಮ್ಮೆಲ್ಲರ ಸೌಭಾಗ್ಯವೂ ಹೌದು.

ಕರ್ನಾಟಕದ ಇತಿಹಾಸದಲ್ಲಿ ಬೆಳಗಾವಿಯಲ್ಲಿ ನಡೆಯುತ್ತಿರುವ ಈ ಅಧಿವೇಶನವು ಸುವರ್ಣ ಪುಟದ ಮಹತ್ವದ ಅಧ್ಯಾಯ. ಇದೇ ಪ್ರಥಮ ಬಾರಿಗೆ ವಿಧಾನ ಸೌಧದ ವಿಧಾನ ಮಂಡಲದ ಸಭಾಂಗಣದಿಂದ ಹೊರಬಂದು ರಾಜಧಾನಿಯೇತರ ನಗರದಲ್ಲಿ ವಿಧಾನ ಮಂಡಲದ ಅಧಿವೇಶನ ನಡೆಯುತ್ತಿದೆ. ಪ್ರಾದೇಶಿಕ ಅಸಮತೋಲನವನ್ನು ನಿವಾರಿಸುವ ದಿಸೆಯಲ್ಲಿ ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸುತ್ತಿರುವುದು ಒಂದು ಐತಿಹಾಸಿಕ ಮಹತ್ವದ ಸಂದರ್ಭ

ಹಾಗೂ ಇದು ಉತ್ತರ ಕರ್ನಾಟಕದ ಜನತೆ ಹಲವು ದಶಕಗಳಿಂದ ಕನಸು ಕಂಡ ಮಹತ್ವದ ಅಪೇಕ್ಷೆಯಾಗಿದ್ದು, ಈಗ ನನಸಾಗುತ್ತಿದೆ.

ಬೆಳಗಾವಿ ಜಿಲ್ಲೆಯು ಒಂದು ವಿಶಿಷ್ಟ ಜಿಲ್ಲೆಯಾಗಿದ್ದು ಶೌರ್ಯ ಮತ್ತು ಸಾಹಸಕ್ಕೆ ಹೆಸರಾದ ಸ್ಥಳ. ಅಪ್ರತಿಮ ದೇಶಭಕ್ತಿ ಹಾಗೂ ಸ್ವಾತಂತ್ರ್ಯ ಪ್ರೇಮಕ್ಕೆ ಜ್ವಲಂತ ಸಾಕ್ಷಿಯಾದ ನೆಲ ಈ ಬೆಳಗಾವಿ. ಬ್ರಿಟೀಷ್ ಆಡಳಿತವನ್ನು ನಡುಗಿಸಿದಂತಹ ಕಿತ್ತೂರಿನ ವೀರರಾಣಿ ಚೆನ್ನಮ್ಮ, ಬೆಳವಾಡಿ ಮಲ್ಲಮ್ಮ, ಮಲ್ಲಸರ್ಜ ದೇಸಾಯಿ, ಸಂಗೊಳ್ಳಿ ರಾಯಣ್ಣ ಬೆಳಗಾವಿಯ ನೆಲದಲ್ಲಿ ಹುಟ್ಟಿದವರು. ಬಾಲಗಂಗಾಧರ ತಿಲಕರು **'ಸ್ವರಾಜ್ಯ ನನ್ನ ಜನ್ಮಸಿದ್ಧಹಕ್ಕು'** ಎಂದು ಘೋಷಿಸಿದ್ದು ಬೆಳಗಾವಿಯಲ್ಲಿ. 1924ರಲ್ಲಿ ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ **ಕಾಂಗ್ರೆಸ್** ಅಧಿವೇಶನ ನಡೆದಿದ್ದು ಬೆಳಗಾವಿಯಲ್ಲಿ. **'ಸುಪ್ರಸಿದ್ಧ ಹೋಂ ರೂಲ್ ಚಳವಳಿ'** ಚಾಲನೆ ಪಡೆದಿದ್ದು ಬೆಳಗಾವಿ ಮಣ್ಣಿನಲ್ಲಿ.

ಕನ್ನಡ ಸಾಂಸ್ಕೃತಿಕ ಪರಂಪರೆಗೆ ಅಪ್ರತಿಮ ಪ್ರತಿಭಾವಂತರನ್ನು ಬೆಳಗಾವಿ ಕೊಟ್ಟಿದೆ. ಶಾಸ್ತ್ರೀಯ ಸಂಗೀತ ಗಾಯನದಲ್ಲಿ ಅಭೂತಪೂರ್ವ ಜನಮನ್ನಣೆಯನ್ನು ಗಳಿಸಿದ **ಕುಮಾರ ಗಂಧರ್ವರು** ಹುಟ್ಟಿದ್ದು ಬೆಳಗಾವಿಯಲ್ಲಿ. ಅಸಾಧಾರಣ **ಅಭಿನೇತ್ರಿ ಸುಲೋಚನಾ** ಈ ಜಿಲ್ಲೆಯ ಹೆಮ್ಮೆಯ ಕೊಡುಗೆ. ಆಧುನಿಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಅನೇಕ ಮಹನಿಯರು ಈ ಜಿಲ್ಲೆಯವರು. **ಬೆಟಗೇರಿ ಕೃಷ್ಣಮೂರ್ತಿ, ಕೃಷ್ಣಮೂರ್ತಿ ಪುರಾಣಿಕ, ಬಸವರಾಜ ಕಟ್ಟಿಮನಿ, ಡಿ.ಎಸ್. ಕರ್ಕಿ, ಅಕ್ಬರ್ ಆಲಿ, ಸನದಿ, ಶಂಭಾಜೋಷಿ** ಈ ಜಿಲ್ಲೆಯ ಸಾಹಿತ್ಯ ಕ್ಷೇತ್ರದ ಪ್ರಮುಖ ಹೆಸರುಗಳು. ರಾಷ್ಟ್ರಮಟ್ಟದ ಖ್ಯಾತಿ ಪಡೆದ ಕವಿ ಮತ್ತು ನಾಟಕಕಾರ ಡಾ: ಚಂದ್ರಶೇಖರ ಕಂಬಾರ ಬೆಳಗಾವಿ ಜಿಲ್ಲೆಯವರು. ಕನ್ನಡ ರಂಗಭೂಮಿಗೆ ಬೆಳಗಾವಿ ವಿಶಿಷ್ಟ ಕೊಡುಗೆಯನ್ನು ನೀಡಿದೆ. ಸಾವಿರ ಹಾಡಿನ ಸರದಾರ **ಹುಕ್ಕೇರಿ ಬಾಳಪ್ಪ,** ಗುಬ್ಬಿವೀರಣ್ಣ ಪ್ರಶಸ್ತಿ ಪುರಸ್ಕೃತ **ಏಣಗಿ ಬಾಳಪ್ಪ** ಈ ಜಿಲ್ಲೆಯವರು. ಹೀಗೆ ಬೆಳಗಾವಿ ನೆಲ ಕನ್ನಡ ಸಂಸ್ಕೃತಿಗೆ ನೀಡಿರುವ ಕೊಡುಗೆ ಬಹು ದೊಡ್ಡದು.

ಇಂತಹ ಸಂದರ್ಭದಲ್ಲಿ ಬೆಳಗಾವಿಯಲ್ಲಿ ನಡೆಯುತ್ತಿರುವ ಅಧಿವೇಶನದಲ್ಲಿ ನಮ್ಮ ಕರೆಯನ್ನು ಮನ್ನಿಸಿ **'ಸುವರ್ಣ ಕರ್ನಾಟಕ'** ಸಂದರ್ಭದಲ್ಲಿ ಘನತೆವೆತ್ತ ರಾಜ್ಯಪಾಲರು ಆಗಮಿಸುತ್ತಿರುವುದು ಶಾಸಕಾಂಗದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ದಾಖಲಿಸಬೇಕಾದ ಮಹತ್ವದ ಘಟನೆಯಾಗಿದೆ.

I, on behalf of Karnataka Legislature, on behalf of the Government of Karnataka and on behalf of six crore Kannadigas, extend hearty welcome to His Excellency, The Governor of Karnataka to this auspicious and historic occasion.

ಇಂತಹ ಅಭೂತಪೂರ್ವ ಸ್ಮರಣೀಯ ಸಂದರ್ಭದಲ್ಲಿ ಉಪಸ್ಥಿತರಿರುವ ಕರ್ನಾಟಕ ಶಾಸಕಾಂಗದ ಕಾರ್ಯಚಟುವಟಿಕೆಗಳಲ್ಲಿ ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತಿರುವ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರ ಸ್ವಾಮಿರವರಿಗೆ, ಉಪ ಮುಖ್ಯಮಂತ್ರಿಯವರಾದ ಶ್ರೀ ಬಿ.ಎಸ್.ಯಡಿಯೂರಪ್ಪ ರವರಿಗೆ, ವಿಧಾನ ಪರಿಷತ್ತಿನ ಸಭಾ ನಾಯಕರು ಹಾಗ ಉನ್ನತ ಶಿಕ್ಷಣ ಸಚಿವರಾದ ಶ್ರೀ ಡಿ.ಹೆಚ್. ಶಂಕರಮೂರ್ತಿಯವರಿಗೆ, ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಎಂ.ಪಿ. ಪ್ರಕಾಶ್‌ರವರಿಗೆ, ಇತರೆ ಎಲ್ಲಾ ಮಾನ್ಯ ಸಚಿವರುಗಳಿಗೆ, ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾಪತಿಗಳಾದ ಶ್ರೀ ಸಚ್ಚಿದಾನಂದ ಹೊತ್‌ರವರಿಗೆ ಸ್ವಾಗತವನ್ನು ಕೋರುತ್ತೇನೆ. ಉಭಯ ಸದನಗಳ ಸನ್ಮಾನ್ಯ ವಿರೋಧ ಪಕ್ಷದ ನಾಯಕರುಗಳಿಗೆ, ಉಭಯ ಸದನಗಳಲ್ಲಿನ ವಿವಿಧ ಪಕ್ಷದ ನಾಯಕರುಗಳಿಗೆ, ಹಾಗೂ ವಿಧಾನ ಸಭೆಯ ಉಪ ಸಭಾಧ್ಯಕ್ಷರುಗಳಿಗೆ, ವಿಧಾನ ಮಂಡಲದ ಮುಖ್ಯ ಸಚೇತಕರಿಗೆ, ವಿಧಾನ ಮಂಡಲದ ಶಾಸಕರುಗಳಿಗೆ ಹಾರ್ದಿಕ ಸ್ವಾಗತವನ್ನು ಕೋರುತ್ತೇನೆ.

ಅದೇ ರೀತಿಯಲ್ಲಿ ಬೆಂಗಳೂರಿನಿಂದ ಬೆಳಗಾವಿಗೆ ಬಂದು ಅಧಿವೇಶನವು ಯಶಸ್ವಿಯಾಗಲು ಕಾರಣಕರ್ತರಾದ ವಿಧಾನ ಮಂಡಲದ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಹಾಗೂ ಈ ಸಂದರ್ಭದಲ್ಲಿ ಉಪಸ್ಥಿತರಿರುವ ರಾಜ್ಯದ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳಿಗೆ ಮತ್ತು ಸಮಯಾಭಾವದಿಂದ ಉಲ್ಲೇಖಿಸಲು ಸಾಧ್ಯವಾಗದ ಸರ್ವರಿಗೆ ಹಾರ್ದಿಕ ಸ್ವಾಗತವನ್ನು ಕೋರುತ್ತೇನೆ.

ಈ ಚಾರಿತ್ರಿಕ ಅಧಿವೇಶನ ನಡೆಯಲು ಸುಸಜ್ಜಿತ ವ್ಯವಸ್ಥೆಗಳನ್ನು ಕಡಿಮೆ ಅವಧಿಯಲ್ಲಿ ಅಭೂತಪೂರ್ವವಾಗಿ ವ್ಯವಸ್ಥೆಗೊಳಿಸಿರುವ ಕೆ.ಎಲ್.ಇ. ಸಂಸ್ಥೆಯವರಿಗೆ ಹಾಗೂ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಪ್ರಭಾಕರ ಕೋರೆ ಅವರುಗಳಿಗೆ ಮತ್ತು ಬೆಳಗಾವಿ ಜಿಲ್ಲಾಡಳಿತಕ್ಕೆ ಅಭಿನಂದನೆಗಳು.

ಕೊನೆಯದಾಗಿ, ಆಕಾಶವಾಣಿ, ದೂರದರ್ಶನ, ಇತರೆ ವಿದ್ಯುನ್ಮಾನ ಮಾಧ್ಯಮದ ಮತ್ತು ಎಲ್ಲಾ ಪತ್ರಿಕಾ ಸಂಪಾದಕರು ಮತ್ತು ಪ್ರತಿನಿಧಿಗಳಿಗೆ ಈ ಸುಸಂದರ್ಭದಲ್ಲಿ ಹೃದಯಪೂರ್ವಕ ಸ್ವಾಗತವನ್ನು ಕೋರುತ್ತೇನೆ.

ಮತ್ತೊಮ್ಮೆ ಉಪಸ್ಥಿತರಿರುವ ಸಮಸ್ತರಿಗೆ ಕರ್ನಾಟಕ ವಿಧಾನ ಮಂಡಲದ ಪರವಾಗಿ **'ಸುವರ್ಣ ಕರ್ನಾಟಕ'**ದ ಸುವರ್ಣ ಸಂಭ್ರಮದ ಸ್ವಾಗತವನ್ನು ಕೋರುತ್ತೇನೆ.

"ಜೈ ಹಿಂದ್ ಜೈ ಕರ್ನಾಟಕ"

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು): ಸನ್ಮಾನ್ಯರೇ, ಕಳೆದ ನಾಲ್ಕು ದಿನಗಳಿಂದ ರಾಜ್ಯದ ರಾಜಕೀಯ ಇತಿಹಾಸದಲ್ಲಿ ಅತ್ಯಂತ ಮಹತ್ವವಾದ ಘಟನೆಯೊಂದಕ್ಕೆ ನಾವುಗಳು ಸಾಕ್ಷಿಯಾಗುತ್ತಿದ್ದೇವೆ. ರಾಜ್ಯದ ರಾಜಧಾನಿಯ ಹೊರಗೆ ಮೊದಲ ಬಾರಿಗೆ ಈ ವಿಧಾನಮಂಡಲ ಅಧಿವೇಶನ ನಡೆಯುತ್ತಿದೆ.

ಸ್ವಾತಂತ್ರ್ಯೋತ್ತರ ಭಾರತದ ಸಂಸದೀಯ ಇತಿಹಾಸದಲ್ಲಿಯೇ ಮೊಟ್ಟ ಮೊದಲ ಬಾರಿಗೆ ದಾಖಲೆ ಎನಿಸುವಂತೆ ಬೆಳಗಾವಿಯಲ್ಲಿ ವಿಧಾನ ಮಂಡಲದ ಅಧಿವೇಶನವನ್ನು ನಡೆಸಲು ಕಾರಣರಾದ ರಾಜ್ಯದ ಎಲ್ಲಾ ರಾಜಕೀಯ ಪಕ್ಷಗಳಿಗೂ ಹಾಗೂ ಶಾಸಕ ಮಿತ್ರರಿಗೂ ಮೊದಲಿಗೆ ನನ್ನ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

1924ರಲ್ಲಿ ಮಹಾತ್ಮ ಗಾಂಧಿ ಅವರು ಬೆಳಗಾವಿಗೆ ಬೇಟಿ ನೀಡಿದ್ದು ಒಂದು ಅವಿಸ್ಮರಣೀಯ ಘಟನೆ. ಈಗ ನಡೆಯುತ್ತಿರುವ ಅಧಿವೇಶನದಲ್ಲಿ ಘನತೆವೆತ್ತ ರಾಜ್ಯಪಾಲರು ನಮ್ಮನ್ನೆಲ್ಲರನ್ನು ಉದ್ದೇಶಿಸಿ ಮಾತನಾಡುತ್ತಿರುವುದು ಮತ್ತೊಂದು ಐತಿಹಾಸಿಕ ಘಟನೆಗೆ ಸಾಕ್ಷಿಯಾಗಿದೆ ಎಂದರೆ ತಪ್ಪಾಗಲಾರದು. ಈ ಅಪರೂಪದ ಅಧಿವೇಶನಕ್ಕೆ ಆಗಮಿಸಿರುವ ಘನತೆವೆತ್ತ ರಾಜ್ಯಪಾಲರನ್ನು ಸರ್ಕಾರದ ಪರವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ವಿಧಾನ ಸಭೆಯ ಮಾನ್ಯ ಸಭಾಧ್ಯಕ್ಷರಿಗೆ, ವಿದಾನ ಮಂಡಲದ ಮಾನ್ಯ ಸಭಾಪತಿಗಳಿಗೆ ಉಭಯ ಸದನಗಳ ಮಾನ್ಯ ವಿರೋಧ ಪಕ್ಷ ನಾಯಕರುಗಳಿಗೆ, ವಿಧಾನ ಮಂಡಲದ ಶಾಸಕರುಗಳಿಗೆ ನನ್ನ ಹೃತ್ಪೂರ್ವಕ ಸ್ವಾಗತ.

ಮಾಧ್ಯಮ ಮಿತ್ರರುಗಳಿಗೆ, ಹಾಗೂ ಇಲ್ಲಿ ನೆರೆದಿರುವ ಎಲ್ಲಾ ಸಭೀಕರಿಗಳಿಗೂ ನನ್ನ ಹೃದಯಪೂರ್ವಕ ಸ್ವಾಗತ.

ಕರ್ನಾಟಕ ಇಂದು ಸುವರ್ಣ ಸಂಭ್ರಮವನ್ನು ಆಚರಿಸುತ್ತಿದೆ. ಈ ಪವಿತ್ರ ಸಂದರ್ಭದಲ್ಲಿ ಬೆಳಗಾವಿಯಲ್ಲಿ ನಡೆಸಲಾಗುತ್ತಿರುವ ಈ ಅಧಿವೇಶನದ ಉದ್ದೇಶ ಉತ್ತರ ಕರ್ನಾಟಕದ ಸಮಗ್ರ ಬೆಳವಣಿಗೆಗೆ ಒಂದು ನಿಶ್ಚಿತ ರೂಪವನ್ನು ತಂದುಕೊಡುವುದರ ಜೊತೆಗೆ ಮಹಾಜನ ವರದಿಯನ್ನು ಯಥಾವತ್ತಾಗಿ ಅನುಷ್ಠಾನಕ್ಕೆ ಕೇಂದ್ರವನ್ನು ಒತ್ತಾಯಿಸುವುದಾಗಿತ್ತು.